ಶ್ರೀ ಕೆ. ಎಚ್. ಪಾಟೀಲ್.—ಈಗ ಇಲ್ಲಿ ಹೇಳಿರತಕ್ಕ ಖಚ್ಚೆಗಳು ಬಹಳ ದಿವಸಗಳಿಂದಲೂ ಅಂದರೆ ಹಿಂದಿನ ಕೇಸುಗಳೂ ಸೇರಿ ಪೆಂಡಿಂಗ್ ಇರುತ್ತವೆ. ಅವುಗಳನ್ನು ತೀವ್ರ ನಿಖಾಲೆ ಮಾಡುವಂತೆ ಪ್ರಾರ್ಥಿಸಿದ್ದೇವೆ. ಆದರೆ ಕೇಸ್ಟುಗಳು ನಮ್ಮ ಹಿಡಿತದಲಿಲ್ಲ. ಆದಾಗ್ಯೂ ಮಾನ್ಯ ಸದಸ್ಯರು ಈ ವಿಷಯವನ್ನು ಸರ್ಕಾರದವರ ಗಮನಕ್ಕೆ ತಂದುದರಿಂದ ನಾನು ನಮ್ಮ ಚೀಫ್ ಜಸ್ಟೀಸ್ ಅವರಿಗೆ ಈ ಖಚ್ಚೆಗಳನ್ನು ಬೇಗ ನಿಖಾಲೆ ಮಾಡುವಂತೆ ಒಂದು ಪತ್ರವನ್ನು ಬರೆಯುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈ ಕಳ್ಳತನವನ್ನು ನಿಲ್ಲಿಸುವುದಕ್ಕೆ ಇನ್ನೂ ಬಿಗಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುವರೇ ?

ಶ್ರೀ ಕೆ. ಎಚ್. ಪಾಟೀಲ್.—ಸಾಧ್ಯವಾದ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತೇವೆ.

ಒಬ್ಬ ಮಾನ್ಯ ಸದಸ್ಯರು.—ಬಹುಮಾನ ಕೊಡತಕ್ಕದ್ದನ್ನು ಮುಂಚಿತವಾಗಿಯೇ ಜನರಿಗೆ ಪ್ರಚಾರ ಮಾಡಿದ್ದೀರಾ ?

ಶ್ರೀ ಕೆ. ಎಚ್. ಪಾಟೀಲ್.—ಹಾಗೆ ಮಾಡುವುದು ಸೂಕ್ತವಾದುದಲ್ಲ. ಒಂದು ಸಂದರ್ಭದಲ್ಲಿ ದೊಡ್ಡ ಮೊತ್ತದ ನಾಟಾ ಕಳವನ್ನು ಸರ್ಕಾರದವರ ನಜರಿಗೆ ತಂದ ಸಂದರ್ಭದಲ್ಲಿ ಹಿಂದೆ ಒಬ್ಬ ವ್ಯಕ್ತಿಗೆ 5 ಸಾವಿರ ರೂಪಾಯಿಗಳ ಬಹುಮಾನ ನೀಡಲಾಗಿದೆ.

SCHEDULED CASTES AND SCHEDULED TRIBES EMPLOYEES IN AIDED INSTITUTIONS IN HYDERABAD KARNATAK AREA.

12. Sri MALLIKARJUN KHARGE (Gurmitkal).—

Will the Minister for Education be pleased to state :—

(*a*) the number of private educational institutions in the State aided by Government;

(*b*) the number of private educational institutions in Hyderabad Karnatak area aided by Government;

(*c*) the number of employees working in Government aided institutions in the State and of them, the number of employees belonging to Scheduled Castes/Scheduled Tribes;

(*d*) the number of employees working in Government aided institutions in Hyderabad Karnatak area and of them, the number of employees belonging to Scheduled Castes/Scheduled Tribes;

(*e*) whether the Government has taken any steps to maintain percentage fixed in respect of appointment of scheduled castes and tribes in the Government aided institutions ?

Sri A. R. BADARINARAYANA (Minister for Education).—

(*a*) 3,642.

(*b*) 121.

(SRI A. R. BADARINARAYANA)

(*c*) 30,203—Scheduled Castes .. 459
Scheduled Tribes .. 14

(*d*) 1,240—Scheduled Castes .. 13
Scheduled Tribes .. 4

(*e*) The grant-in-aid Provisions contemplate the appointment through a selection Committee of the respective managements. The feasibility of maintaining the ratio of Scheduled Castes and Scheduled Tribes in aided institutions with reference to the provisions of the grant-in-aid will be examined.

Sri MALLIKARJUN KHARGE.—To question (*c*), you have replied that out of 30,203, only 459 Scheduled Castes employees are working in the private aided institutions. It means that only 12 per cent representation has been given to the Scheduled Castes. May I know whether the Government will take steps to stop the aid to such institutions which do not provide the employment opportunities to the Scheduled Castes according to the fixed ratio ?

† Sri A. R. BADARINARAYANA.—This number is accummulated over years ; but now, Government is making an earnest attempt to see that the proportion is maintained.

Sri MALLIKARJUN KHARGE.—In Hyderabad Karnatak area, 121 institutions have employed 1,240 employees and out of this number only 13 Scheduled Castes and Tribes are working. In order to secure adequate representations to the Scheduled Castes, whether the Government will take appropriate action against the Hyderabad Karnatak Education Society to give opportunities to the Scheduled Castes people also ?

Sri A. R. BADARINARAYANA.—There is one difficulty with regard to private educational institutions in the State and that is they are not Statutary Bodies and as such it would be difficult to insist upon maintaining proportion ; but as far as possible, Government are very sympathetic and will certainly see that due proportion is maintained.

ಶ್ರೀ ಕಾಗೋಡು ತಿಮ್ಮಪ್ಪ.—ಖಾಸಗೀ ಸಂಸ್ಥೆಗಳಲ್ಲಿ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುತಕ್ಕ ವಿಚಾರದಲ್ಲಿ ಕೇದರ್ ಅಂಡ್ ರೆಕ್ರೂಟ್‌ಮೆಂಟ್ ನಿಬಂಧನೆಗಳನ್ನು ಅನುಸರಿಸುವಂತೆ ಮಾಡಲು ಸರ್ಕಾರದವರು ಏನಾದರೂ ಆಲೋಚನೆ ಮಾಡಿದ್ದಾರೆಯೇ ?

ಶ್ರೀ ಎ. ಆರ್. ಬದರಿನಾರಾಯಣ.—ಇಲ್ಲಿಯವರೆಗೂ ಆ ಆಲೋಚನೆ ಮಾಡಿಲ್ಲ. ಈಗ ಈ ಒಂದು ಸಲಹೆ ಬಂದಿದೆ. This is a suggestion which will be noted.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ.—ಪರಿಶಿಷ್ಟವರ್ಗ ಮತ್ತು ಪರಿಶಿಷ್ಟ ಜನಾಂಗದವರಿಗೆ ಬೋರ್ಡುಗಳಲ್ಲಿ ಮತ್ತು ಕಾರ್ಪೊರೇಷನ್ನುಗಳಲ್ಲಿ ರಿಜರ್ವೇಷನ್ ಮಾಡಿರುವಾಗ, ಈ ಖಾಸಗೀ ವಿದ್ಯಾ ಸಂಸ್ಥೆಗಳಲ್ಲಿ ಈ ಜನಾಂಗದವರಿಗೆ ರಿಜರ್ವೇಷನ್ ಮಾಡುವುದಕ್ಕೇನು ತೊಂದರೆ ಇದೆ ! ತಾವು ಹೇಳುತ್ತಿರುವುದನ್ನು ನೋಡಿದರೆ ರಿಜರ್ವೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವಂತೆ ಹೇಳುತ್ತಿದ್ದೀರಿ ಅಲ್ಲವೇ ?

ಶ್ರೀ ಎ. ಆರ್. ಬದರಿನಾರಾಯಣ.—ನಾನು ಹಾಗೆ ಹೇಳಿಲ್ಲಿಲ್ಲ. ಸಾಧ್ಯವಾದರೆ ಇವರಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಲ್ಲಿ ರಿಜರ್ವೇಷನ್ ಮಾಡುವುದಕ್ಕೆ ಏರ್ಪಾಡು ಮಾಡಬೇಕೆಂಬ ಆಸೆ ನಮಗಿದೆ.

Mr. SPEAKER.—Shri Naidu has been authorised to put question on behalf of Sri Chandrasekhar.

LOCAL CANDIDATES SERVING IN THE DEPARTMENT OF COLLEGIATE EDUCATION.

37. Sri NAIDU [On behalf of Sri S. M. SHEERANALY CHANDASEKHAR (Hosanagar).]—

Will the Minister for Education be pleased to state:—

(*a*) the number of local candidates serving in the Department of Collegiate Education;

(*b*) whether the services of these candidates have been regularised;

(*c*) if not, whether the Government intends to regularise the services of such local candidates who are serving from a long time?

Sri A. R. BADARINARAYANA (Minister for Education).—

(*a*) Ministerial 61
Teaching staff (Lecturers/Demonstrators) 162

(*b*) No.

(*c*) As these candidates do not satisfy the stipulations laid down in Government Order No. GAD 15 SRL 70, dated 10th December 1970, the question of regularisation of their services does not arise.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಸ್ಯಾಮಿ ತಮ್ಮ ಉತ್ತರದಲ್ಲಿ ಜಿ. ಎ. ಡಿ. 15; ಎಸ್. ಆರ್. ಎರ್. 70 ನೇ ಕ್ರಮಾಂಕದ 1970ನೇ ಇಸವಿ ಡಿಸೆಂಬರ್ ಮಾಹೆ 10ನೇ ದಿನಾಂಕದ ಸರ್ಕಾರಿ ಆದೇಶದ ಪ್ರಕಾರ ಇವರು ಆ ಷರತ್ತುಗಳನ್ನು ಪೂರೈಸದಿರುವುದರಿಂದ ಇವರಸೇವೆಯನ್ನು ಕ್ರಮಗೊಳಿಸುವುದಕ್ಕೆ ಆ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ತಿಳಿಸಲಾಗಿದೆ. ಹಾಗಾದರೆ ಈ ಹಿಂದಕ್ಕೆ ಸೇವೆ ಸಲ್ಲಿಸಿದವರ ಸಂಖ್ಯೆ ಎಷ್ಟಿದೆ? ಅವರ ಬಗ್ಗೆ ಸರ್ಕಾರದವರು ಯಾವ ನೀತಿಯನ್ನು ಅನುಸರಿಸುವರು!

† ಶ್ರೀ ಎ. ಆರ್. ಬದರಿನಾರಾಯಣ್.—ಈ ಲೋಕಲ್ ಕ್ಯಾಂಡಿಡೇಟುಗಳು ಪ್ರತಿ ವರ್ಷವೂ ಬರುತ್ತಲೇ ಇರುತ್ತಾರೆ. ಡೈರೆಕ್ಟ್ ರೆಕ್ರೂಟ್‌ಮೆಂಟ್ ಮಾಡತಕ್ಕ ಕಾಲದಲ್ಲಿ ಪಿ. ಎಸ್. ಸಿ. ಅವರ ನೇಮಗಳಿಗೆ ವಿರುದ್ಧವಾಗಿ ಯಾರನ್ನೂ ನೇಮಕ ಮಾಡಬಾರದೆಂದಿದೆ. ಆದರೆ ತಾತ್ಕಾಲಿಕವಾಗಿ ಯಾರನ್ನು ತೆಗೆದುಕೊಳ್ಳಲಾಗಿದೆಯೋ ಅವರಿಗೆ ತಮ್ಮನ್ನು ತಾತ್ಕಾಲಿಕವಾಗಿಯೇ ತೆಗೆದುಕೊಳ್ಳಲಾಗಿದೆ ಎನ್ನುವುದು ಗೊತ್ತಿದೆ. ಅದನ್ನು ತಿಳಿದೇ ಅವರು ಕೆಲಸಕ್ಕೆ ಸೇರಿರುತ್ತಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಈ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಮೊದಲೇ ಒಂದು ನೀತಿ ನಿಯಮಗಳನ್ನು ಹಾಕುವುದಕ್ಕೆ ಸಾಧ್ಯವಿದೆಯೇ?